**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 1141/2015** **CW**-13 **PW**-13

**ಸಾಕ್ಷಿಯನ್ನು ದಿಃ 12.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ರಾಜು ಎಂ ಎಸ್ |
| ತಂದೆಯ ಹೆಸರುಃ | ಶಿವಬಸವೇಗೌಡ |
| ವಯಸ್ಸುಃ | 42 ವರ್ಷ |
| ವೃತ್ತಿಃ | ಪಿ ಐ ಸುಬ್ರಮಣ್ಯಪುರ ಪೋಲೀಸ್ ಠಾಣೆ ಬೆಂಗಳೂರು |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಆಗಸ್ಟ್ 2012 ರಿಂದ ಜೂನ್ 2014 ರವರೆಗೆ ನಾನು ಚನ್ನರಾಯಪಟ್ಟಣ ನಗರ ಠಾಣೆಯುಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10.04.2014 ರಂದು ಚಾಸಾ-12 ರವರಿಂದ ಮುಂದಿನ ತನಿಖೆಗಾಗಿ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ.

ದಿಃ 10.04.2014 ರಂದು ಸಂಜೆ 5.30 ರಿಂದ 6.15 ರ ಸಮಯದಲ್ಲಿ ನಮ್ಮ ಠಾಣಾ ಸಿಬ್ಬಂದಿ ಚಾಸಾ-11 ರವರು ಕಾರು ಸಂಖ್ಯೆ ಕೆಎ 13 ಎ 8927 ರ ವಾಹನವನ್ನು ಠಾಣೆಗೆ ತಂದಿದ್ದು, ಪಂಚರಾದ ಚಾಸಾ-9 ರವರ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 85/2014 ರಲ್ಲಿ ನಮೂದಿಸಿರುತ್ತೇನೆ.

ಸಾಕ್ಷಿ ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

ದಿಃ 11.04.2014 ರಂದು ಚಾಸಾ-5 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 21.04.2014 ರಂದು ಚಾಸಾ-3 ಮತ್ತು ಚಸಾ-4 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 23.06.2014 ರಂದು ಮುಂದಿನ ತನಿಖೆಗಾಗಿ ಕಡತವನು ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಸಿ ಎನ್ ಎನ್ ರವರಿಂದ ಃ**

ನಾನು ನಿಪಿ-4 ರಂತೆ ಅಮಾನತ್ತು ಮಹಜರ್ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-2ರಿಂದ ಚಾಸಾ-4 ರವರ ಹೇಳಿಕೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**